# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 694(972) |
| ಸದಸ್ಯರ ಹೆಸರು | : | ಶ್ರೀ ಎಂ.ಎಲ್.ಅನಿಲ್ ಕುಮಾರ್ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 27.12.2022 |
| ಉತ್ತರಿಸಬೇಕಾದವರು | : | ನಗರಾಭಿವೃದ್ಧಿ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕೋಲಾರ ಮತ್ತು ಚಿಕ್ಕಬಳ್ಳಾಪುರ ನಗರಾಬಿವೃದ್ಧಿ ಪ್ರಾಧಿಕಾರದಿಂದ ಕಳೆದ ಮೂರು ವರ್ಷಗಳಿಂದ ಕೈಗೊಂಡಿರುವ ಯೋಜನೆ ಮತ್ತು ಕಾಮಗಾರಿಗಳಾವುವು: (ವರ್ಷವಾರು ಮಾಹಿತಿ ನೀಡುವುದು). | **ಕೋಲಾರ ನಗರಾಭಿವೃದ್ಧಿ ಪ್ರಾಧಿಕಾರ:**<br>2020-21 ಮತ್ತು 2021-22 ನೇ ಸಾಲಿನಲ್ಲಿ ಯಾವುದೇ ಯೋಜನೆ ಮತ್ತು ಕಾಮಗಾರಿಗಳನ್ನು ಕೈಗೊಂಡಿರುವುದಿಲ್ಲ.<br><br>2022-23 ನೇ ಸಾಲಿನಲ್ಲಿ ಕೋಲಾರ ನಗರಾಭಿವೃದ್ಧಿ ಪ್ರಾಧಿಕಾರದ ಶ್ರೀ ದೇವರಾಜು ಅರಸು ಬಡಾವಣೆಯ ಬ್ಲಾಕ್ 1,2,3 ರ ಕೆಲವು ಅಡ್ಡ ರಸ್ತೆಗಳಲ್ಲಿದ್ದ, ಜಂಗಲ್ ಕ್ಲೀನ್ ಕಾಮಗಾರಿ ಹಾಗೂ ಶ್ರೀ ದೇವರಾಜು ಅರಸು ಬಡಾವಣೆಯ ಸಾರ್ವಜನಿಕರಿಗೆ ರಸ್ತೆ ಬದಿ ಬೀದಿ ದೀಪಗಳನ್ನು ಅಳವಡಿಸುವ ಕಾಮಗಾರಿಯನ್ನು ಕೈಗೊಳ್ಳಲಾಗಿದೆ.<br><br>**ಚಿಕ್ಕಬಳ್ಳಾಪುರ ನಗರಾಭಿವೃದ್ಧಿ ಪ್ರಾಧಿಕಾರ:**<br>2020-21 ನೇ ಸಾಲಿನಲ್ಲಿ ಸರ್ಕಾರದ ಆದೇಶ ಸಂಖ್ಯೆ:ನಅಇ 01 ಬೆಂರೂಪ್ರಾ 2021, ದಿನಾಂಕ:17.02.2021 ರನ್ವಯ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಬರುವ ಗಂಗನಮಿದ್ದೆ ಗ್ರಾಮದ ಸ.ನಂ. 270 ರಲ್ಲಿ 00ಎಕರೆ-31ಗುಂಟೆ ಪೈಕಿ 00ಎಕರೆ-24.08ಗುಂಟೆ ವಿಸ್ತೀರ್ಣದ ಕಂದವಾರ ಕೆರೆ ಏರಿ ಬದಿಯಲ್ಲಿ ಎಕೋ ಥೀಮ್ ಪಾರ್ಕ್ ನ್ನು ಪ್ರಾಧಿಕಾರದಲ್ಲಿ ಲಭ್ಯವಿರುವ ಕೆರೆ ಸಂರಕ್ಷಣ ಶುಲ್ಕ ನಿಧಿಯಿಂದ ಅಭಿವೃದ್ಧಿಪಡಿಸುವ ಕಾಮಗಾರಿಯನ್ನು ರೂ. 8.10 ಕೋಟಿ ಅಂದಾಜು ವೆಚ್ಚದಲ್ಲಿ ಕೈಗೊಳ್ಳಲು ಸರ್ಕಾರದ ಆಡಳಿತಾತ್ಮಕ ಮಂಜೂರಾತಿ ನೀಡಲಾಗಿರುತ್ತದೆ. |

| | | |
|---|---|---|
| | | ಅದರಂತೆ ಕಂದವಾರ ಕೆರೆ ಏರಿ ಬದಿ ಏಕೋ ಥೀಮ್ ಪಾರ್ಕ್ ನಿರ್ಮಾಣದ ಕಾಮಗಾರಿಯನ್ನು ಪ್ರಾಧಿಕಾರವು ಕೈಗೆತ್ತಿಗೊಂಡಿದ್ದು, ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.<br><br>2021-22 ಹಾಗೂ 2022-23 ನೇ ಸಾಲಿನಲ್ಲಿ ಯಾವುದೇ ಯೋಜನೆಗಳನ್ನು ಪ್ರಾಧಿಕಾರವು ಕೈಗೆತ್ತಿಕೊಂಡಿರುವುದಿಲ್ಲ. |
| ಆ) | ಅಮೃತ ಅಭಿಯಾನ ಯೋಜನೆಯಡಿ ಯಾವ ಯಾವ ಅಭಿವೃದ್ಧಿ ಕಾಮಗಾರಿಯನ್ನು ನಡೆಸಲಾಗಿದೆ; (ಮಾಹಿತಿ ನೀಡುವುದು). | ಕೋಲಾರ ನಗರಾಭಿವೃದ್ಧಿ ಪ್ರಾಧಿಕಾರದ ಶ್ರೀ ದೇವರಾಜು ಅರಸು ಬಡಾವಣೆಯಲ್ಲಿ 11.50 ಕಿ.ಮೀ. ಮೇಲಿನ ನೀರು ಕೊಳವೆ ಮಾರ್ಗ ಮತ್ತು ಆಳುಗುಂಡಿಗಳನ್ನು ನಿರ್ಮಾಣ ಮಾಡಿದ್ದು, 1326 ಗೃಹ ಸಂಪರ್ಕಗಳನ್ನು ನಿವೇಶನದ ಬಳಿ ನೀಡಲಾಗಿರುತ್ತದೆ. ಸದರಿ ಬಡಾವಣೆಯಲ್ಲಿ 2 ಸೆಪ್ಟಿಕ್ ಟ್ಯಾಂಕುಗಳನ್ನು ನಿರ್ಮಿಸಿ ಒಳಚರಂಡಿ ಕಾಮಗಾರಿಗಳನ್ನು ಚಾಲನೆಗೊಳಿಸಿ ವಾಸದ ಮನೆಗಳಿಗೆ ಯುಜಿಡಿ ಸಂಪರ್ಕವನ್ನು ಕಲ್ಪಿಸಲಾಗಿರುತ್ತದೆ.<br><br>ಅಮೃತ್ ಸಿಟಿ ಯೋಜನೆಯಡಿಯಲ್ಲಿ ಪ್ರಾಧಿಕಾರದ ಬಡಾವಣೆಯಲ್ಲಿ ನಗರಸಭೆ ಕೋಲಾರ ವತಿಯಿಂದ 8040.00 ಚ.ಮೀ. ಜಾಗದಲ್ಲಿ ಉದ್ಯಾನವನ ಅಭಿವೃದ್ಧಿ ಪಡಿಸಲಾಗಿದೆ.<br><br>ಕೇಂದ್ರ ಪುರಸ್ಕೃತ ಅಮೃತ್ 1.0 ಯೋಜನೆಯಡಿಯಲ್ಲಿ ಈ ಕೆಳಕಂಡ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ.<br><br>1) ನೀರು ಸರಬರಾಜು.<br>2) ಒಳಚರಂಡಿ ಮತ್ತು ಸಪಟೇಜ್ ನಿರ್ವಹಣೆ.<br>3) ಮಳೆ ನೀರು ಚರಂಡಿ.<br>4) ಹಸಿರು ಜಾಗ ಮತ್ತು ಉದ್ಯಾನವನ ಅಭಿವೃದ್ಧಿ.<br>5) ನಗರ ಸಾರಿಗೆ. |
| ಇ) | ಕೋಲಾರ ಮತ್ತು ಚಿಕ್ಕಬಳ್ಳಾಪುರ ನಗರಾಭಿವೃದ್ಧಿ ಪ್ರಾಧಿಕಾರದಿಂದ ಹೊಸ ಬಡಾವಣೆ ನಿರ್ಮಾಣ ಮಾಡಲು ಯಾವುದಾದರೂ ಕ್ರಮ ಕೈಗೊಳ್ಳಲಾಗಿದೆಯೇ; (ಸಂಪೂರ್ಣ ಮಾಹಿತಿ ನೀಡುವುದು). | ಕೋಲಾರ ನಗರಾಭಿವೃದ್ಧಿ ಪ್ರಾಧಿಕಾರದಿಂದ ಹಾಗೂ ಚಿಕ್ಕಬಳ್ಳಾಪುರ ನಗರಾಭಿವೃದ್ಧಿ ಪ್ರಾಧಿಕಾರದಿಂದ ಯಾವುದೇ ಹೊಸ ಬಡಾವಣೆ ನಿರ್ಮಾಣ ಮಾಡಿರುವುದಿಲ್ಲ. |

| | | |
|---|---|---|
| ಈ | ಪ್ರಾಧಿಕಾರದಿಂದ ಕಳೆದ ಮೂರು ವರ್ಷಗಳಿಂದ ಇಲ್ಲಿಯವರೆಗೂ ಕೈಗೊಂಡಿರುವ ಒಳಚರಂಡಿ ಕಾಮಗಾರಿಗಳಿಗೆ ಯಾವ ಯಾವ ಅನುದಾನವನ್ನು ಬಳಸಲಾಗಿದೆ ಹಾಗೂ ಕಾಮಗಾರಿಯ ಮೊತ್ತವೆಷ್ಟು? (ಸಂಪೂರ್ಣವಾದ ವಿವರ ನೀಡುವುದು). | ಕೋಲಾರ ಮತ್ತು ಚಿಕ್ಕಬಳ್ಳಾಪುರ ನಗರಾಭಿವೃದ್ಧಿ ಪ್ರಾಧಿಕಾರಗಳಿಂದ ಕಳೆದ ಮೂರು ವರ್ಷಗಳಿಂದ ಇಲ್ಲಿಯವರೆಗೂ ಯಾವುದೇ ಒಳಚರಂಡಿ ಕಾಮಗಾರಿಯನ್ನು ಕೈಗೊಂಡಿರುವುದಿಲ್ಲ. |

**ಸಂಖ್ಯೆ: ನಅಇ 63 ಎಲ್‌ಸಿಕ್ಯೂ 2022(ಇ-ಕಡತ)**

**(ಬಿ.ಎ. ಬಸವರಾಜು)**
ನಗರಾಭಿವೃದ್ಧಿ ಸಚಿವರು

(ಬಿ.ಎ. ಬಸವರಾಜು)
ನಗರಾಭಿವೃದ್ಧಿ ಸಚಿವರು